ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

---

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಅಕ್ಟೋಬರ್ 9 , 2014

**ಪತ್ರಿಕಾ ಪ್ರಕಟಣೆ**

# ಹಿರಿಯ ಪತ್ರಕರ್ತ ಎಂ. ವಿ. ಕಾಮತ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

**ಬೆಂಗಳೂರು, ಅಕ್ಟೋಬರ್ 9 (ಕರ್ನಾಟಕ ವಾರ್ತೆ) :**

ಪ್ರಸಾರ ಭಾರತಿ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಕರ್ತ ಶ್ರೀ ಎಂ. ವಿ. ಕಾಮತ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಅಂದಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಜನಿಸಿ, ಮೊದಲು ರಾಸಾಯನಿಕ ತಜ್ಞನಾಗಿ ಕಾರ್ಯನಿರ್ವಹಿಸಿ, ನಂತರ ಪತ್ರಕರ್ತನಾಗಿ ವಿಶ್ವ ಪರ್ಯಟನೆ ಮಾಡಿ, ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿ ಮತ್ತೆ ತಮ್ಮ ಹುಟ್ಟೂರಿನಲ್ಲೇ ಕೊನೆಯುಸಿರೆಳೆದ ಶ್ರೀ ಮಾಧವ ವಿಠ್ಠಲ ಕಾಮತ್ ಅವರು ಸದಾ ಮೊಗದಲ್ಲಿ ಎಳೆ ನಗೆ, ವೃತ್ತಿಯಲ್ಲಿ ಪರಿಶ್ರಮ ಹಾಗೂ ಬರವಣಿಗೆಯಲ್ಲಿ ವಿಶೇಷತೆ ಮತ್ತು ಜಾಣ್ಮೆಗೆ ಮತ್ತೊಂದು ಹೆಸರಾಗಿದ್ದರು. ಸುಮಾರು ಒಂಭತ್ತೂವರೆ ದಶಕಗಳ ತುಂಬು ಜೀವನದಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸಕ್ರಿಯ ಪತ್ರಿಕೋಧ್ಯಮದಲ್ಲಿ ತೊಡಗಿದ್ದ ಶ್ರೀ ಎಂ. ವಿ. ಕಾಮತ್ ಅವರು ನಲವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ ಎಂದು ಶ್ರೀ ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಶ್ರೀ ಎಂ. ವಿ. ಕಾಮತ್ ಅವರ ನಿಧನದಿಂದ ಸಾವಿರಾರು ಪ್ರಮುಖ ಘಟನಾವಳಿಗಳನ್ನು ದಾಖಲಿಸಿದ್ದ ಅತ್ಯುತ್ತಮ ಪತ್ರಕರ್ತರೋರ್ವರನ್ನು ರಾಷ್ಟ್ರ ಕಳೆದುಕೊಂಡಂತಾಗಿದೆ ಎಂದು ಮುಖ್ಯಮಂತ್ರಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*******

ಡಿ ಪಿ ಎಂ